# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 333
ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
ಉತ್ತರಿಸುವ ದಿನಾಂಕ : 07-07-2023
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಇಲಾಖೆ ಸಚಿವರು.

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಸ್ಟೆಲ್‌ಗಳ ಎಷ್ಟು;</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿ ಸರ್ಕಾರಿ ವಿದ್ಯಾರ್ಥಿನಿಲಯಗಳ ಕಟ್ಟಡದ ವಿವರಗಳು ಈ ಕೆಳಕಂಡಂತಿದೆ.<br><br>
<table>
<tr><th>ವಿದ್ಯಾರ್ಥಿ ನಿಲಯಗಳ ಸಂಖ್ಯೆ</th><th>ಸ್ವಂತ ಕಟ್ಟಡ</th><th>ಬಾಡಿಗೆ/ ಬಾಡಿಗೆ ರಹಿತ ಕಟ್ಟಡ</th><th>ನಿರ್ಮಾಣ ಹಂತ</th><th>ನಿವೇಶನ ಲಭ್ಯ</th><th>ನಿವೇಶನ ರಹಿತ</th></tr>
<tr><td>30</td><td>23</td><td>7</td><td>2</td><td>1</td><td>4</td></tr>
</table>
</td></tr>
<tr><td>ಆ.</td><td>ಜಿಲ್ಲೆಯಲ್ಲಿನ ಸದರಿ ಎಲ್ಲಾ ಹಾಸ್ಟೆಲ್‌ಗಳು ಸ್ವಂತ ಕಟ್ಟಡ ಹೊಂದಿವೆಯೆ ಹಾಗೂ ಈ ಎಲ್ಲಾ ಹಾಸ್ಟೆಲ್‌ಗಳಿಗೆ ಅಗತ್ಯ ಹಾಗೂ ಅವಶ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ;</td><td>ನಿವೇಶನ ಲಭ್ಯವಿರುವ 01 ವಿದ್ಯಾರ್ಥಿನಿಲಯಕ್ಕೆ, 2022-23ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯ ಆದೇಶ ಸಂ: ಪಿಡಬ್ಲ್ಯುಡಿ-14: ಆರ್‌ಡಿಎಫ್ (ಭಾ-1)-2022, ದಿ:23-01-2023ರಲ್ಲಿ ರೂ.6.50 ಕೋಟಿಗಳ ಅಂದಾಜು ವೆಚ್ಚದಲ್ಲಿ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಮುಂದುವರೆದು, ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಹಾಗೂ ಕಾಲ ಕಾಲಕ್ಕೆ ಅಗತ್ಯ ದುರಸ್ತಿ/ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಅಗತ್ಯ ಮೂಲಭೂತ ಸೌಕರ್ಯಗಳನ್ನು ನಿಲಯಾರ್ಥಿಗಳಿಗೆ ಒದಗಿಸಲು ಕ್ರಮ ವಹಿಸಲಾಗುತ್ತಿದೆ.</td></tr>
</table>

| | | |
|---|---|---|
| ಇ. | ಸದರಿ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ದೊರೆಯುತ್ತಿರುವ ಸೌಲಭ್ಯಗಳ ವಿವರಗಳೇನು; ಹಾಗೂ ಮುಂದಿನ ವರ್ಷದಲ್ಲಿ ಈ ಹಾಸ್ಟೆಲ್‌ಗಳಲ್ಲಿನ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ಬೇಡಿಕೆಗನುಗುಣವಾಗಿ ಗಣನೀಯವಾಗಿ ಹೆಚ್ಚಿಸಲು ಕ್ರಮ ವಹಿಸಲಾಗುವುದೇ? | ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಒದಗಿಸಲಾಗುತಿರುವ ಮೂಲಭೂತ ಸೌಕರ್ಯಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.<br><br>ಈಗಾಗಲೇ ಎಲ್ಲಾ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆಗೆ ಅನುಗುಣವಾಗಿ ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ. ಹೆಚ್ಚುವರಿಯಾಗಿ ಪ್ರವೇಶಾತಿ ಕೋರಿ ಬರುವ ಎಲ್ಲಾ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಖಾಸಗಿ ಕಟ್ಟಡವನ್ನು ಪಡೆದು ನಿಲಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಲಾಗುತ್ತಿದೆ. ಬೇಡಿಕೆಗನುಗುಣವಾಗಿ ಸಂಖ್ಯೆಬಲ ಹೆಚ್ಚಳ ಕೋರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ್ ರವರಿಂದ ಸೂಕ್ತ ಪ್ರಸ್ತಾವನೆ ಸ್ವೀಕೃತವಾದಲ್ಲಿ ಸಂಖ್ಯಾಬಲ ಹೆಚ್ಚಿಸಲು ಕ್ರಮವಹಿಸಲಾಗುವುದು. |

**ಸಕಇ 208 ಎಸ್‌ಎಲ್‌ಪಿ 2023**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಇಲಾಖೆ ಸಚಿವರು**

# ಅನುಬಂಧ-1

| ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು |
|---|---|
| • ಮಾಹೆಯಾನ ರೂ.1650.00/-ರ ವೆಚ್ಚದಲ್ಲಿ ಭೋಜನ.<br>• ಮಾಹೆಯಾನ ರೂ.93.00ರ ವೆಚ್ಚದಲ್ಲಿ ಬಾಲಕರಿಗೆ ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಡಿಟರ್ಜೆಂಟ್ ಕೇಕ್, ಕೊಬ್ಬರಿ ಎಣ್ಣೆ, ಟೂತ್ ಪೇಸ್ಟ್ ಮತ್ತು ಟೂತ್ ಬ್ರಷ್.<br>• ಮಾಹೆಯಾನ ರೂ.134.00ರ ವೆಚ್ಚದಲ್ಲಿ ಬಾಲಕಿಯರಿಗೆ ಈ ಮೇಲಿನ ಸಾಮಾಗ್ರಿಗಳ ಜೊತೆಗೆ ಹೆಚ್ಚುವರಿಯಾಗಿ ಟಾಲ್ಕಂ ಪೌಡರ್‌ನ್ನು ನೀಡಲಾಗುವುದು.<br>• ವಾರ್ಷಿಕ ರೂ.662.00 ರಿಂದ 1102.00ರ ವೆಚ್ಚದಲ್ಲಿ 02 ಜೊತೆ ಸಮವಸ್ತ್ರಗಳು.<br>• ವಾರ್ಷಿಕ ರೂ.363.39ರ ವೆಚ್ಚದಲ್ಲಿ 01 ಜೊತೆ ಶೂ ಮತ್ತು ಸಾಕ್ಸ್.<br>• ವಾರ್ಷಿಕ ರೂ.400.00ರ ವೆಚ್ಚದಲ್ಲಿ ಪಠ್ಯ ಪುಸ್ತಕ ಮತ್ತು ಲೇಖನ ಸಾಮಾಗ್ರಿ.<br>• ವಾರ್ಷಿಕ ರೂ.150.00 ರ ವೆಚ್ಚದಲ್ಲಿ ಬಾಲಕರಿಗೆ ಕ್ಷೌರದ ವೆಚ್ಚ.<br>• ಮೂರು ವರ್ಷಕ್ಕೊಮ್ಮೆ ರೂ.800.00 ವೆಚ್ಚದಲ್ಲಿ ಹಾಸಿಗೆ ಹೊದಿಕೆ.<br>• ಪ್ರತಿ ನಿಲಯಕ್ಕೆ ವಾರ್ಷಿಕ ರೂ.3000.00 ವೆಚ್ಚದಲ್ಲಿ ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ.<br>• 50 ವಿದ್ಯಾರ್ಥಿಗಳ ಸಂಖ್ಯೆಯ ಪ್ರತಿ ನಿಲಯಕ್ಕೆ ವಾರ್ಷಿಕ ರೂ.5000.00 ರ ವೆಚ್ಚದಲ್ಲಿ ಹಾಗೂ 100 ವಿದ್ಯಾರ್ಥಿಗಳ ಸಂಖ್ಯೆ ಮೀರಿದ ಪ್ರತಿ ನಿಲಯಕ್ಕೆ ವಾರ್ಷಿಕ ರೂ.8000.00ಗಳ ವೆಚ್ಚದಲ್ಲಿ ವೈದ್ಯಕೀಯ ಸೌಲಭ್ಯ.<br>• ವರ್ಷದಲ್ಲಿ 6 ತಿಂಗಳು ವಿಜ್ಞಾನ, ಗಣಿತ, ಇಂಗ್ಲೀಷ್ ಮತ್ತು ಇತರೆ ಸಾಮಾನ್ಯ ವಿಷಯಗಳಲ್ಲಿ 03 ಅರೆ ಕಾಲಿಕ ಬೋಧಕರಿಂದ ವಿಶೇಷ ಬೋಧನೆ.(ವಾರ್ಷಿಕ ವೆಚ್ಚ ರೂ.18,000/-)<br>• ಪ್ರತಿ ನಿಲಯಕ್ಕೆ ಎರಡು ವರ್ಷಕ್ಕೊಮ್ಮೆ ರೂ.20,000.00ಗಳ ಮಿತಿಯೊಳಗೆ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುವುದು. | • ಮಾಹೆಯಾನ ರೂ.1750.00/-ರ ವೆಚ್ಚದಲ್ಲಿ ಭೋಜನ.<br>• ಮೂರು ವರ್ಷಕ್ಕೊಮ್ಮೆ ರೂ.1000.00 ವೆಚ್ಚದಲ್ಲಿ ಹಾಸಿಗೆ,ಹೊದಿಕೆ.<br>• ಪ್ರತಿ ನಿಲಯಕ್ಕೆ ವಾರ್ಷಿಕ ರೂ.3500.00 ವೆಚ್ಚದಲ್ಲಿ ದಿನ ಪತ್ರಿಕೆ/ವಾರ/ಮಾಸ ಪತ್ರಿಕೆಗಳ ವೆಚ್ಚ.<br>• ಮಾಹೆಯಾನ ರೂ.93.00ರ ವೆಚ್ಚದಲ್ಲಿ ಬಾಲಕರಿಗೆ ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಡಿಟರ್ಜೆಂಟ್ ಕೇಕ್, ಕೊಬ್ಬರಿ ಎಣ್ಣೆ, ಟೂತ್ ಪೇಸ್ಟ್ ಮತ್ತು ಟೂತ್ ಬ್ರಷ್.<br>• ಮಾಹೆಯಾನ ರೂ.134.00ರ ವೆಚ್ಚದಲ್ಲಿ ಬಾಲಕಿಯರಿಗೆ ಈ ಮೇಲಿನ ಸಾಮಾಗ್ರಿಗಳ ಜೊತೆಗೆ ಹೆಚ್ಚುವರಿಯಾಗಿ ಟಾಲ್ಕಂ ಪೌಡರ್‌ನ್ನು ನೀಡಲಾಗುವುದು.<br>• ಪ್ರತಿ ನಿಲಯಕ್ಕೆ ಎರಡು ವರ್ಷಕ್ಕೊಮ್ಮೆ ರೂ.20,000.00ಗಳ ಮಿತಿಯೊಳಗೆ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುವುದು<br>• ಪ್ರತಿ ಬಾಲಕಿ ವಿದ್ಯಾರ್ಥಿನಿಯರಿಗೆ ರೂ.857.00ರ ವೆಚ್ಚದಲ್ಲಿ 01 ಜೊತೆ ಕರಾಟೆ/ಜುಡೋ/ಟೇಕ್ವಾಂಡೋ ಸಮವಸ್ತ್ರ<br>• ಇಲಾಖೆಯ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ಯೋಗ ತರಬೇತಿ.<br>• ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳು. |